ಪ್ರಧಾನ ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ. ರವರ ನ್ಯಾಯಾಲಯ,
ಮಧುಗಿರಿ

PW-1 — 29/6/26

ಅಸಲು ದಾವಾ ಸಂಖ್ಯೆ: 179/2025

| ವಾದಿ | ವಿರುದ್ಧ | ಪ್ರತಿವಾದಿಗಳು |
|---|---|---|
| ಅನಿಲ್‌ಕುಮಾರ್. | | ಶಿವಮ್ಮ ಮತ್ತು ಇತರರು. |

29/6/26

Prl. Senior Civil Judge & JMFC
MADHUGIRI

ವಾದಿಯ ಮುಖ್ಯ ವಿಚಾರಣೆಯ ಸಾಕ್ಷ್ಯರೂಪದ ಹೇಳಿಕೆ ಪ್ರಮಾಣ ಪತ್ರದ ಮುಖೇನ

| | |
|---|---|
| ಸಾಕ್ಷಿದಾರರ ಹೆಸರು: | ಅನಿಲ್‌ಕುಮಾರ್ |
| ತಂದೆ ಹೆಸರು : | ಬಾಬುರೆಡ್ಡಿ |
| ವಯಸ್ಸು : | 41 ವರ್ಷ |
| ವಿಳಾಸ : | ದೊಡ್ಡಕುರುಗೋಡು ಗ್ರಾಮ, ಕಸಬಾ ಹೋಬಳಿ, ಗೌರಿಬಿದನೂರು ತಾಲ್ಲೂಕು. |

ಈ ಮೇಲ್ಕಂಡ ಸಾಕ್ಷಿದಾರನಾದ ನಾನು ದೇವರ ಹೆಸರಿನಲ್ಲಿ ಪ್ರಮಾಣ ಮಾಡಿ ಹೇಳುವುದೇನೆಂದರೆ.

ನಾನು ಈ ಕೇಸಿನಲ್ಲಿ ವಾದಿ ಇದ್ದೇನೆ. ಪ್ರತಿವಾದಿಗಳು ಗೊತ್ತು, ಅವರು ಮಧುಗಿರಿ ತಾಲ್ಲೂಕು, ಐ.ಡಿ.ಹಳ್ಳಿ ಹೋಬಳಿ, ಹಳೇಇಟಕಲೋಟಿ ಗ್ರಾಮದವರು. ದಾವಾ ಆಸ್ತಿಯನ್ನು ನೋಡಿರುತ್ತೇನೆ. ದಾವಾ ಆಸ್ತಿಯ ಸರ್ವೆನಂಬರ್ 26/1 ಆಗಿದ್ದು, 4-14 ಗುಂಟೆ ಇದ್ದು, ಖರಾಬು 0-14 ಗುಂಟೆ ಸೇರಿದ್ದು, ಚೆಕ್ಕುಬಂದಿ, ಪೂರ್ವಕ್ಕೆ:ನಾರಾಯಣರೆಡ್ಡಿ ರವರ ಜಮೀನು, ಪಶ್ಚಿಮಕ್ಕೆ:ನಾರಾಯಣರೆಡ್ಡಿರವರ ಜಮೀನು, ಉತ್ತರಕ್ಕೆ:ರಂಗಪ್ಪರವರ ಜಮೀನು, ದಕ್ಷಿಣಕ್ಕೆ:ನಾರಾಯಣಪ್ಪರವರ ಜಮೀನು.

ದಾವಾ ಆಸ್ತಿ ಮೂಲತಹ ಪ್ರತಿವಾದಿಗಳಿಗೆ ಸೇರಿದ್ದು, ಅವರ ಸ್ವಾಧೀನಾನುಭವದಲ್ಲಿದ್ದು, ಪೌತಿ ವಾರಸು ಮುಖೇನ ಪ್ರತಿವಾದಿಗಳಿಗೆ ಬಂದಂತಹ ಆಸ್ತಿಯಾಗಿದ್ದು, ಪ್ರತಿವಾದಿಗಳೆಲ್ಲರೂ ಅವರ ಗೃಹಕೃತ್ಯದ ನಿಮಿತ್ತ ನನಗೆ ದಿನಾಂಕ:25-07-2023 ರಂದು ನೊಂದಣಿ ಕ್ರಯದ ಕರಾರಿನ ಅಡಿಯಲ್ಲಿ ನೊಂದಣಿ ಸಂಖ್ಯೆ: ಎಂ.ಡಿ.ಜಿ.-1-01559-2023-24 ರಂತೆ ಒಟ್ಟಾಗಿ ರೂ.10,00,000/- ಗಳಿಗೆ ಮಾತನಾಡಿ ಮೇಲ್ಕಂಡ ದಿನಾಂಕದಂದು ನೊಂದಾಯಿತ ಕ್ರಯದ ಕರಾರನ್ನು ನನ್ನ ಹೆಸರಿಗೆ ಮಾಡಿಸಿಕೊಟ್ಟು ರೂ.10,00,000/- ಗಳ ಪೈಕಿ ರೂ.8.00,000/- ಗಳನ್ನು ಗೌರಿಬಿದನೂರು ತಾಲ್ಲೂಕು, ವಿದುರಾಶ್ವತ್ಥ ಶಾಖೆಯ ಕರ್ನಾಟಕ ಗ್ರಾಮೀಣ ಬ್ಯಾಂಕ್‌ನ ಚೆಕ್ ನಂಬರ್ 004422 ಮುಖೇನ ಪ್ರತಿವಾದಿಗಳಿಗೆ ಸಂದಾಯವಾಗಿದ್ದು, ಇನ್ನುಳಿದ ರೂ.2,00,000/- ಗಳನ್ನು ನೊಂದಣಿ ಕ್ರಯಪತ್ರದ ವೇಳೆಯಲ್ಲಿ ನನ್ನಿಂದ ಪಡೆದು ನೊಂದಣಿ ಕ್ರಯಪತ್ರ ಬರೆದುಕೊಡಲು ಮಾತನಾಡಿ ಪ್ರತಿವಾದಿಗಳೆಲ್ಲರೂ ಒಪ್ಪಿ ಕ್ರಯದ ಕರಾರಿಗೆ ಸಹಿಗಳನ್ನು ಮಾಡಿ ಸಾಕ್ಷಿದಾರರ ಸಮಕ್ಷಮ ಮೇಲ್ಕಂಡ ಹಣವನ್ನು ಪಡೆದಿರುತ್ತಾರೆ.

ನೊಂದಣಿ ಕ್ರಯದ ಕರಾರಿನ ದಿನಾಂಕದಿಂದ ಮೂರು ತಿಂಗಳೊಳಗೆ ಸಂಬಂಧಪಟ್ಟ ದಾಖಲೆಗಳನ್ನು ಅಂದರೆ 11-ಇ ಸ್ಕೆಚ್ ಮಾಡಿಸಿಕೊಂಡು ನನ್ನ ಹೆಸರಿಗೆ ನೊಂದಣಿ ಕ್ರಯಪತ್ರ ಮಾಡಿಕೊಡಲು ವಾಗ್ದಾನ ಮಾಡಿದ್ದು, ಸದರಿ ವಾಗ್ದಾನದಂತೆ ನಾನು ಮೂರು ತಿಂಗಳೊಳಗೆ ಮೂರು ಬಾರಿ ಪ್ರತಿವಾದಿಗಳನ್ನು ನನ್ನ ಹೆಸರಿಗೆ ನೊಂದಣಿ ಕ್ರಯದ ಕರಾರಿನ ರೀತಿ ಶುದ್ಧ

NOTARY
B.K. ANNAPURNADEVI
MADHUGIRI
REVENUE TALUK
TUMAKURU DIST
LAW-LCL/36/2023
EXP 05/10/2028
GOVT. OF KARNATAKA

No. of Corrections:- Nil

Anilkumar

ಕ್ರಯಪತ್ರ ಬರೆದುಕೊಡಲು ಹಲವಾರು ಬಾರಿ ಮೌಖಿಕವಾಗಿ ಅವರ ಊರಿಗೆ ಹೋಗಿ ಕೇಳಿಕೊಂಡಾಗ ಪ್ರತಿವಾದಿಗಳು 11-ಇ ಸ್ಕೆಚ್ ತಯಾರಿಲ್ಲ, ನಾವು ನಿಮ್ಮ ಹೆಸರಿಗೆ ಕ್ರಯದ ಕರಾರಿನ ರೀತಿ ಶುದ್ಧ ಕ್ರಯಪತ್ರ ಬರೆದುಕೊಡಲು ಭಾದ್ಯರಿರುತ್ತೇವೆ ಎಂದು ತಿಳಿಸಿದಾಗ ನಾನು ಪ್ರತಿವಾದಿಗಳನ್ನ ನಂಬಿ ನಮ್ಮ ಊರಿಗೆ ವಾಪಸ್ಸು ಹೋಗಿರುತ್ತೇನೆ, ನಾನು ವಾಪಸ್ಸು ಹೋದ 15 ದಿನಗಳ ನಂತರ ಪ್ರತಿವಾದಿಗಳು ಅವರ ಹೆಸರಿಗೆ ನಮೂದಾಗಿರುವ ಕಂದಾಯ ದಾಖಲೆಗಳನ್ನು ಬಳಸಿಕೊಂಡು 3ನೇ ವ್ಯಕ್ತಿಗೆ ಹೆಚ್ಚಿನ ಬೆಲೆಗೆ ದಾವಾ ಆಸ್ತಿಯನ್ನು ಮಾರಾಟ ಮಾಡಲು ಪ್ರಯತ್ನ ಪಡುತ್ತಿರುತ್ತಾರೆಂದು ನನಗೆ ವಿಚಾರ ಗೊತ್ತಾದ ತಕ್ಷಣ ಮತ್ತೊಮ್ಮೆ ನಾನು ಪ್ರತಿವಾದಿಗಳ ಬಳಿ ಹೋಗಿ ನನ್ನ ಹೆಸರಿಗೆ ನೊಂದಣಿ ಕ್ರಯಪತ್ರ ಬರೆದುಕೊಡಲು ಕೇಳಿಕೊಂಡಾಗ ಪ್ರತಿವಾದಿಗಳು ಸಹಕಾರ ನೀಡದ ಕಾರಣ ಹಾಗೂ ನನ್ನ ಮನವಿಗೆ ಸ್ಪಂದಿಸಿದ ಕಾರಣ ನಾನು ನಮ್ಮ ವಕೀಲರ ಮೂಲಕ ದಿನಾಂಕ;5-4-2025 ರಂದು ಲೀಗಲ್ ನೋಟೀಸನ್ನು ಕಳುಹಿಸಿದ್ದು, ಸದರಿ ನೋಟೀಸು ತಲುಪಿದ್ದರೂ ಸಹ ಯಾವುದೇ ಪ್ರತ್ಯುತ್ತರ ಕೊಡದೇ ಹೋದಾಗ ನಾನು ಪ್ರತಿವಾದಿಗಳ ವಿರುದ್ಧ ದಿನಾಂಕ:25-07-2023 ರ ನೊಂದಣಿ ಕ್ರಯದ ಕರಾರಿನ ನಿರ್ಧಿಷ್ಟ ಅನುಷ್ಟಾನವನ್ನು ಕೋರಿ ನ್ಯಾಯಾಲಯಕ್ಕೆ ಈ ದಾವೆಯನ್ನು ಸಲ್ಲಿಸಿಕೊಳ್ಳಲು ವ್ಯಾಜ್ಯಕಾರಣವಿರುತ್ತದೆ.

ನಾನು ನೊಂದಣಿ ಕ್ರಯದ ಕರಾರು ಆದ ದಿನದಿಂದಲೂ ಸಹ ಪ್ರತಿವಾದಿಗಳ ಊರಿಗೆ ಹೋಗಿ ಅವರನ್ನು ದಾವಾ ಸ್ವತ್ತಿನ ಮೇಲೆ ನನ್ನ ಹೆಸರಿಗೆ ಶುದ್ಧಕ್ರಯಪತ್ರ ಬರೆದುಕೊಡಲು ಹಲವಾರು ಬಾರಿ ಕೇಳಿಕೊಂಡರೂ ಸಹ ಪ್ರತಿವಾದಿಗಳು ಕ್ರಯದ ಕರಾರಿನ ರೀತಿ ನಡೆದುಕೊಳ್ಳುವಲ್ಲಿ ವಿಫಲರಾಗಿದ್ದು, ನಾನು ಕ್ರಯದ ಕರಾರಿನ ದಿನದಿಂದಲೂ ಇಲ್ಲಿಯವರೆವಿಗೂ ನೊಂದಣಿ ಕ್ರಯಪತ್ರ ಬರೆಸಿಕೊಳ್ಳಲು ಸಿದ್ದನಿರುತ್ತೇನೆ.

ಆದ್ದರಿಂದ ಘನ ನ್ಯಾಯಾಲಯವು ನಾನು ನನ್ನ ದಾವೆಯಲ್ಲಿ ಸಲ್ಲಿಸಿರುವ ಎಲ್ಲಾ ದಾಖಲೆಗಳನ್ನು ನಿಶಾನೆಗಳಾಗಿ ಗುರುತಿಸಿ ದಾವೆಯನ್ನು ದಾವೆಯಲ್ಲಿ ಕೇಳಿದ ರೀತಿ ಖರ್ಚು ಸಮೇತ ಡಿಕ್ರಿ ಮಾಡಿಸಿಕೊಡಬೇಕಾಗಿ ಪ್ರಾರ್ಥಿಸಿಕೊಳ್ಳುತ್ತೇನೆ. ಈ ನೊಂದಣಿ ಕ್ರಯದ ಕರಾರಿಗೆ ಸಾಕ್ಷಿದಾರರಾಗಿ ಪಿ.ನಾಗೀರೆಡ್ಡಿ, ವಿ.ನರಸಿಂಹರೆಡ್ಡಿ, ದೇವಿ ಎಂಬುವವರು ಸಹಿ ಮಾಡಿರುತ್ತಾರೆ. ಈ ದಾಖಲೆಯನ್ನು ಒಬ್ಬ ಹೆಚ್.ಕೆ.ರಂಗನಾಥ್ ಎಂಬುವರು ಗಣಕಯಂತ್ರದಲ್ಲಿ ಬೆರಳಚ್ಚು ಮಾಡಿ ಬಿಕ್ಕಲಂದಾರರಾಗಿ ಸಹಿ ಮಾಡಿರುತ್ತಾರೆ.

ಈ ಮೇಲೆ ಹೇಳಿದ ಎಲ್ಲಾ ಅಂಶಗಳು ಸತ್ಯವಾಗಿದೆಯೆಂದು ಪ್ರಮಾಣೀಕರಿಸಿ ಈ ಕೆಳಕಂಡಂತೆ ಸಹಿ ಮಾಡಿರುತ್ತೇನೆ.

NOTARY
B.A. ANNAPURNADEVI
MADHUGIRI
REVENUE TALUK
TUMAKURU DIST
LAW-LCL/96/2023
EXP 05/10/2028
GOVT OF KARNATAKA

ಗುರುತು ಬಲ್ಲವರು:

ವಕೀಲರು

ಮಧುಗಿರಿ

ದಿನಾಂಕ: 9-4-2026

Anil Kumar

ಪ್ರಮಾಣಕರ್ತರು

SWORN TO BFORE ME

B.A.ANNAPURNADEVI, B.A., LL.B
ADVOCATE & NOTARY
GOVT. OF KARNATAKA
Bus Stand Road,

No. of Corrections:

ದಿನಾಂಕಃ 29-06-2026 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.

**ಮುಖ್ಯ ವಿಚಾರಣೆಃ- ವಾದಿ ಪರವಾಗಿಃ ಶ್ರೀ. ವಿ.ಆರ್.ಆರ್. ವಕೀಲರಿಂದಃ-**

ನನ್ನ ಮುಖ್ಯ ವಿಚಾರಣೆಯ ಸಲುವಾಗಿ ಪ್ರಮಾಣ ಪತ್ರವನ್ನು ಸಲ್ಲಿಸಿದ್ದು, ಅದರಲ್ಲಿರುವ ಅಂಶಗಳೆಲ್ಲಾ ಸರಿಯಾಗಿವೆ ಮತ್ತು ಸತ್ಯವಾಗಿವೆ ಎಂದು ಪ್ರಮಾಣೀಕರಿಸಿ ನನ್ನ ಸಹಿ ಮಾಡಿರುತ್ತೇನೆ.

ದಾವಾ ಆಸ್ತಿಗೆ ಸಂಬಂಧಪಟ್ಟಂತೆ ಪ್ರತಿವಾದಿಯರು ನನಗೆ ಬರೆದುಕೊಟ್ಟ ನೊಂದಾಯಿತ ಕ್ರಯದ ಕರಾರು ಪತ್ರವನ್ನು ನಿಪಿ1 ಎಂದು, ಅದರಲ್ಲಿರುವ ನನ್ನ ಸಹಿಯನ್ನು ನೋಡಿ ಗುರುತಿಸುತ್ತೇನೆ. ಅದನ್ನು ನಿಪಿ.1(ಎ) ಎಂದು ಗುರುತಿಸಲಾಯಿತು. ಆ ಕ್ರಯದ ಕರಾರು ಪತ್ರಕ್ಕೆ 1 ರಿಂದ 7 ಪ್ರತಿವಾದಿಗಳು ಸಹಿ ಮಾಡಿದ್ದು, ಸದರಿಯವರ ಸಹಿಗಳನ್ನು ನಿಪಿ.1(ಬಿ) ರಿಂದ 1(ಹೆಚ್) ಎಂದು ಗುರುತಿಸಲಾಯಿತು. ಆ ಕ್ರಯದ ಕರರು ಪತ್ರಕ್ಕೆ ನಾಗೀರೆಡ್ಡಿ ಮತ್ತು ನರಸಿಂಹರೆಡ್ಡಿ ಮತ್ತು ದೇವಿ ಎಂಬುವವರು ಸಾಕ್ಷಿದಾರರಾಗಿ ಸಹಿ ಮಾಡಿರುತ್ತಾರೆ. ಆ ಕ್ರಯದ ಕರಾರು ಪತ್ರವನ್ನು ಹೆಚ್.ಕೆ.ರಂಗನಾಥ ಎಂಬುವವರು ಬರೆದು ಬಿಕ್ಲಾಂದಾರರಾಗಿ ಸಹಿ ಮಾಡಿರುತ್ತಾರೆ. ನಾನು ನಮ್ಮ ವಕೀಲರ ಮೂಲಕ ಪ್ರತಿವಾದಿಯರಿಗೆ ಕಳುಹಿಸಿದ ಕಾನೂನುಬದ್ದ ನೋಟೀಸಿನ ಕಚೇರಿ ಪ್ರತಿಯನ್ನು ನಿಪಿ.2 ಎಂದು, ಆ ನೋಟೀಸ್ ಕಳುಹಿಸಿದ ಬಗ್ಗೆ 7 ಅಂಚೆ ರಶೀದಿಗಳನ್ನು ಹಾಜರುಪಡಿಸಿದ್ದು ಅವುಗಳನ್ನು ನಿಪಿ.3 ರಿಂದ 9 ಎಂದು, ದಾವಾ ಆಸ್ತಿಗೆ ಸಂಬಂಧಪಟ್ಟಂತೆ ಒಂದು

AmitKumar

ಗಣಕೀಕೃತ ಪಹಣಿ ಪತ್ರಿಕೆಯನ್ನು ಹಾಜರುಪಡಿಸಿದ್ದು ಅವುಗಳನ್ನು ನಿಪಿ.10 ಎಂದು ಗುರುತಿಸಲಾಯಿತು.

ಆದ್ದರಿಂದ, ದಾವೆಯನ್ನು ಡಿಕ್ರಿ ಮಾಡಬೇಕಾಗಿ ಕೇಳಿಕೊಳ್ಳುತ್ತೇನೆ.

**ಪಾಟೀ ಸವಾಲುಃ- ಪ್ರತಿವಾದಿ ಪರ ವಕೀಲರಿಂದಃ-**

ಈ ಹಂತದಲ್ಲಿ ವಕೀಲರ ವಿನಂತಿ ಮೇರೆಗೆ ಪಾಟೀ ಸವಾಲನ್ನು ಮುಂದೂಡಲಾಯಿತು.

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿ ನುಡಿದಂತೆ ಗಣಕೀಕೃತಗೊಳಿಸಲಾಯಿತು)

Anil Kumar

ಓ.ಹೇ.ಸಾ.ಸ.ಇ.ಒ.

ಪ್ರಧಾನ ಹಿರಿಯ ಸಿವಿಲ್ ಜಡ್ಜ್
ಮತ್ತು ಜೆಎಂಎಫ್‌ಸಿ, ಮಧುಗಿರಿ